ವೀರಾಜಪೇಟೆ ತಾಲ್ಲೂಕಿನ ಕೆರೆಗಳ ಹೂಳು ತೆಗೆಯುವುದು

2187: ಶ್ರೀಮತಿ ಸುಮಾವಸಂತ (ವೀರಾಜಪೇಟೆ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೀರಾಜಪೇಟೆ ತಾಲ್ಲೂಕಿನ ಅನೇಕ ಕೆರೆಗಳ ಹೂಳು ತೆಗೆಯದಿರುವುದರಿಂದಾಗಿ ಕೆರೆಗಳಲ್ಲಿ ಸಾಕಷ್ಟು ನೀರು ನಿಲ್ಲದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿಈ ಬಗ್ಗೆ ಕೂಡಲೆ ಕ್ರಮ ಕೈಗೊಂಡು ಹೂಳು ತೆಗೆಸಿ ರೈತರ ತೊಂದರೆ ನಿವಾರಣೆ ಮಾಡಲಾಗುವುದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯಸಚಿವರು):–

ಅ) ಬಂದಿದೆ.

ಆ) ಪರಿಶೀಲಿಸಲಾಗುವುದು.

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೊಸ ನೀರಾವರಿ ಯೋಜನೆ

846: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನ ಶಿರಾ, ಮಧುಗಿರಿ, ಪಾವಗಡ ಹಾಗೂ ಚಿತ್ರದುರ್ಗದ ಹೊಸದುರ್ಗ, ಹೊಳಲ್‌ಕೆರೆ, ಮೊಳಕಾಲ್ಮೂರ್ ಮತ್ತು ಇತರ ತಾಲ್ಲೂಕುಗಳು ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಈ ಎಲ್ಲಾ ತಾಲ್ಲೂಕುಗಳನ್ನೊಳಗೊಂಡಂತೆ ಸರ್ಕಾರ ಯಾವುದಾದರೂ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳು ಉದ್ದೇಶಿಸಿದೆಯೇ;

ಇ) ಹೀಗಿದ್ದಲ್ಲಿ ಅವು ಯಾವುವು ? ಅವುಗಳನ್ನು ಕಾರ್ಯಗತಗೊಳಿಸಲು ಕಾಲಮಿತಿ ಏನಾದರೂ ಇದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ತಿಳಿದಿದೆ.

ಆ) ಈ ಎಲ್ಲಾ ತಾಲ್ಲೂಕುಗಳನ್ನೊಳಗೊಂಡಂತೆ ಯಾವುದೇ ಸಮಗ್ರ ನೀರಾವರಿ ಯೋಜನೆ ಇರುವುದಿಲ್ಲ. ಆದಾಗ್ಯೂ ಈ ತಾಲ್ಲೂಕುಗಳಲ್ಲಿ ಕೆಲವು ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

ಇ) 1) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2) ಇನ್ನೆರಡು ವರ್ಷಗಳಲ್ಲಿ ಈ ಯೋಜನೆಗಳನ್ನು ಪೂರೈಸಲು ಉದ್ದೇಶಿಸಿದೆ

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 846ಕ್ಕೆ ಸಂಬಂಧಿಸಿದ ಮಾಹಿತಿ

ಕ್ರಮಸಂಖ್ಯೆ	ಕಾಮಗಾರಿಯ ಹೆಸರು

ತುಮಕೂರು ಜಿಲ್ಲೆ

1) ಶಿರಾ ತಾಲ್ಲೂಕು ಕಳ್ಳಂಬೆಳ್ಳ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ (ಹುಂಜನಾಳ ವಾಟರ್ ಶೆಡ್) ಶೀಬಿ ಅಗ್ರಹಾರ ದೊಡ್ಡಕೆರೆಯ ಅಭಿವೃದ್ಧಿ ಯೋಜನೆ (ಸಿಎಡಿಪಿ)
2) ಶಿರಾ ತಾಲ್ಲೂಕು ತರೂರು ಲಕ್ಷ್ಮೀಸಾಗರ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
3) ಶಿರಾ ತಾಲ್ಲೂಕು ಬ್ರಹ್ಮಸಂದ್ರ ಕೊಡಗಿ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
4) ಶಿರಾ ತಾಲ್ಲೂಕು ಬೈಜಾಪುರ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
5) ಶಿರಾ ತಾಲ್ಲೂಕು ಕಳ್ಳಂಬೆಳ್ಳ ಕೆರೆಯ ಜೀರ್ಣೋದ್ಧಾರ
6) ಶಿರಾ ತಾಲ್ಲೂಕು ಮಾರಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
7) ಶಿರಾ ತಾಲ್ಲೂಕು ಬುಕ್ಕಾಪಟ್ಟಣ ನಂದಿಹಳ್ಳ ಕೆರೆ
8) ಶಿರಾ ತಾಲ್ಲೂಕು ತಿಮ್ಮಜ್ಜಿ ಕಟ್ಟೆ ಬಳಿ ಹೊಸಕೆರೆ ನಿರ್ಮಾಣ
9) ಮಧುಗಿರಿ ತಾಲ್ಲೂಕು ತಾಯಿಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
10) ಮಧುಗಿರಿ ತಾಲ್ಲೂಕು ಗಿರಿಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
11) ಮಧುಗಿರಿ ತಾಲ್ಲೂಕು ಕಲಿದೇವರಪುರ ಹೊಸಕೆರೆ ನಿರ್ಮಾಣ
12) ಮಧುಗಿರಿ ತಾಲ್ಲೂಕು ಸಜ್ಜೇಹೊಸಹಳ್ಳಿ ಬಳಿ ಹೊಸಕೆರೆ ನಿರ್ಮಾಣ
13) ಮಧುಗಿರಿ ತಾಲ್ಲೂಕು ಹೊಸಕೋಟೆ ಬಳಿ ಹೊಸಕೆರೆ ನಿರ್ಮಾಣ
14) ಮಧುಗಿರಿ ತಾಲ್ಲೂಕು ಗಾಳಿಹಳ್ಳಿ ಬಳಿ ಹೊಸಕೆರೆ ನಿರ್ಮಾಣ
15) ಮಧುಗಿರಿ ತಾಲ್ಲೂಕು ಹುಣಸೇಮರದ ಹಟ್ಟಿ ಬಳಿ ಹೊಸಕೆರೆ ನಿರ್ಮಾಣ
16) ಮಧುಗಿರಿ ತಾಲ್ಲೂಕು ವಿರೂಪಗೊಂಡಹಳ್ಳಿ ಬಳಿ ಹೊಸಕೆರೆ ನಿರ್ಮಾಣ
17) ಪಾವಗಡ ತಾಲ್ಲೂಕು ಪಲ್ಲವಳ್ಳಿ ಪಲ್ಲವರಾಯನಕೆರೆ ಜೀರ್ಣೋದ್ಧಾರ
18) ಪಾವಗಡ ತಾಲ್ಲೂಕು ದಳವಾಯಿಹಳ್ಳಿ ಹೊಸಕೆರೆ ನಿರ್ಮಾಣ
19) ಪಾವಗಡ ತಾಲ್ಲೂಕು ಕಣಿವೇನಹಳ್ಳಿ ಹೊಸಕೆರೆ ನಿರ್ಮಾಣ
20) ಪಾವಗಡ ತಾಲ್ಲೂಕು ನೇರಳಕುಂಟೆ ಬಳಿ ಹೊಸಕೆರೆ ನಿರ್ಮಾಣ

ಚಿತ್ರದುರ್ಗ ಜಿಲ್ಲೆ

1) ಹೊಸದುರ್ಗ ತಾಲ್ಲೂಕು ದೊಡ್ಡಗಟ್ಟಿ ಬಳಿ ಗಂಗಾ ಕಲ್ಯಾಣ ಯೋಜನೆ

2) ಹೊಸದುರ್ಗ ತಾಲ್ಲೂಕು ಹರೇನಹಳ್ಳಿ (ಬೆಲಗೂರು ಬಳಿ) ಗಂಗಾ ಕಲ್ಯಾಣ ಯೋಜನೆ

3) ಹೊಸದುರ್ಗ ತಾಲ್ಲೂಕು ವಳಲಿ ಬಳಿ ಗಂಗಾ ಕಲ್ಯಾಣ ಯೋಜನೆ

4) ಹೊಳಲ್‌ಕೆರೆ ತಾಲ್ಲೂಕು ಹಾಲೇನಹಳ್ಳಿ ಬಳಿ ಹೊಸಕೆರೆ ನಿರ್ಮಾಣ

5) ಹೊಳಲ್‌ಕೆರೆ ತಾಲ್ಲೂಕು ಗಂಡೇರಿಕಾವಲ್ ಬಳಿ ಗಂಗಾ ಕಲ್ಯಾಣ ಯೋಜನೆ

6) ಹೊಳಲ್‌ಕೆರೆ ತಾಲ್ಲೂಕು ಕಣಿವೇಜೋಗಿಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ

7) ಹೊಳಲ್‌ಕೆರೆ ತಾಲ್ಲೂಕು ಕಸವನಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ

8) ಹೊಳಲ್‌ಕೆರೆ ತಾಲ್ಲೂಕು ಹೊಳಲ್‌ಕೆರೆ ಹಿರೇಕಟ್ಟೆ ಪೋಷಕ್ ಕಾಲುವೆ ನಿರ್ಮಾಣ

9) ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಯೋಜನೆ

ಹಾಸನ ವಿಧಾನಸಭೆ ಕ್ಷೇತ್ರದ ತ್ಯಾಗಟೂರು ಗ್ರಾಮದ ಸ್ಥಳಾಂತರ

1002: ಶ್ರಿ ಕೆ.ಹೆಚ್. ಹನುಮೇಗೌಡ, (ಹಾಸನ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಟ್ಟಾಯ ಹೋಬಳಿ ತ್ಯಾಗಟೂರು ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರದ ಯಾವ ದಿನಾಂಕದಂದು ನಿರ್ಣಯ ತೆಗೆದುಕೊಂಡಿತು, ಈ ಗ್ರಾಮವನ್ನು ಸ್ಥಳಾಂತರಿಸಲು ಅವಾರ್ಡ್ ಯಾವ ದಿನಾಂಕದಂದು ಆಗಿದೆ.

ಆ) ಅವಾರ್ಡ್ ಅನುಸರಿಸಿ ಸಂಬಂಧಿಸಿದ ಆಲ್ಲಿಯ ಜನವರಿಗೆ ಇದುವರೆಗೆ ಅವಾರ್ಡ್ ಹಣವನ್ನು ಕೊಡದಿರಲು ಕಾರಣವೇನು; (ವಿವರ ನೀಡುವುದು);

ಇ) ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ನಾಯಕನಹಳ್ಳಿ ಮತ್ತು ಕಲ್ಲಹಳ್ಳಿ ಗ್ರಾಮಗಳನ್ನು ಅಲ್ಲಿನ ಈ ಗ್ರಾಮಗಳ ಜನರ ಆರೋಗ್ಯ ದೃಷ್ಟಿಯಿಂದ ಸ್ಥಳಾಂತರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ನೆಲಮಂಗಲ ಕೊರಟಗೆರೆ ಲೋಕೋಪಯೋಗಿ ರಸ್ತೆಗಳು

1115: ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?